# ಎರಡನೇ ಅಪರ ಜಿಲ್ಲಾ ಮತ್ತು ಸತ್ರ ನ್ಯಾಯಾಲಯ
# ಬೆಂಗಳೂರು ಗ್ರಾಮಾಂತರ ಜಿಲ್ಲೆ, ಬೆಂಗಳೂರು

ಸ್ಪೆಷಲ್ ಕೇಸ್ ನಂಃ 248/2020

(ಪ್ರಾಸಾ-1 ಚಾಸಾ-1 )
ಸಾಕ್ಷಿಗೆ ಪ್ರಮಾಣ ವಚನ ಬೋಧಿಸಲಾಯಿತು
ದಿಃ08.04.2022.

| | | |
|---|---|---|
| ಸಾಕ್ಷಿದಾರರ ಹೆಸರು | - | ಹೇಮಾ, |
| ತಂದೆಯ/ಗಂಡನ ಹೆಸರು | - | ನಾಗರಾಜ, |
| ವಯಸ್ಸು | - | 35 ವರ್ಷ, |
| ಉದ್ಯೋಗ | - | ಗಾರ್ಮೆಂಟ್ಸ್ ನಲ್ಲಿ ಕೆಲಸ, |
| ವಾಸ | - | ಬಿಸುವನಹಳ್ಳಿ, ವೀರಾಪುರ, ದೊಡ್ಡಬಳ್ಳಾಪುರ ತಾಃ |

**ಮುಖ್ಯ ವಿಚಾರಣೆಃ ಮಾನ್ಯ ವಿಶೇಷ ಸರ್ಕಾರಿ ಅಭಿಯೋಕರವರಿಂದಃ**

ಚಾಸಾ-2 ನನ್ನ ಗಂಡ. ನಾವು ಪರಿಶಿಷ್ಟ ಜಾತಿಯ ಆದಿ ಕರ್ನಾಟಕ ಜಾತಿಗೆ ಸೇರಿದವರು. ಚಾಸಾ-3 ರಿಂದ 7 ರವರ ಪರಿಚಯ ಇದೆ. ಆರೋಪಿಗಳು ಗೊತ್ತು. ಅವರು ಒಕ್ಕಲಿಗ ಜಾತಿಗೆ ಸೇರಿದವರು. ನ್ಯಾಯಾಲಯದ ಮುಂದೆ ಹಾಜರಿರುವ ಆರೋಪಿಗಳನ್ನು ಸಾಕ್ಷಿ ನೋಡಿ ಗುರುತಿಸಿರುತ್ತಾರೆ. ಆರೋಪಿಗಳು ನಮ್ಮ ಊರಿನವರು. ನಮಗೆ ಬಿಸುವನಹಳ್ಳಿಯ ಸರ್ವೆ ನಂಬರ್ 2/2 ರಲ್ಲಿ 1 ಎಕರೆ 11 ಗುಂಟೆ ಜಮೀನು ಇದೆ. ಜಮೀನಿನಲ್ಲಿ ಮನೆ ಮಾಡಿಕೊಂಡು ವಾಸವಾಗಿದ್ದೇವೆ. ನಮಗೂ ಮತ್ತು ಆರೋಪಿತರಿಗೂ ಬಡ್ಡಿ ಹಣದ ವಿಚಾರಕ್ಕೆ ಗಲಾಟೆಯಾಗಿತ್ತು. ನಾವು ಆರೋಪಿತರಿಂದ ಒಂದು ಲಕ್ಷ ಹಣವನ್ನು ಸಾಲ ಪಡೆದಿದ್ದೆವು 20 ಸಾವಿರ ಬಾಕಿ ಇತ್ತು ಹಣವನ್ನು ಬಡ್ಡಿಗಾಗಿ ಸಾಲ ಪಡೆದಿದ್ದೆವು.

ಈ ಹಂತದಲ್ಲಿ ಸರ್ಕಾರಿ ಅಭಿಯೋಜಕರು ಮುಂದುವರಿದ ಮುಖ್ಯ ವಿಚಾರಣೆಗಾಗಿ ಕಾಲಾವಕೋಶ ಕೋರಿದ್ದು ವಿನಂತಿಯ ಮೇರೆಗೆ ಮುಂದುವರಿದ ಮುಖ್ಯ ವಿಚಾರಣೆಗಾಗಿ ಮುಂದೂಡಲಾಯಿತು.

(ಮೇಲ್ಕಂಡ ಸಾಕ್ಷ್ಯವನ್ನು ತೆರೆದ ನ್ಯಾಯಾಲಯದಲ್ಲಿ ತೆಗೆದುಕೊಂಡು ನನ್ನ ಉಕ್ತಲೇಖನದ ಮೇರೆಗೆ ಬೆರಳಚ್ಚು ಮಾಡಿಸಿದೆ)

ಓ ಹೇ ಸಾ ಸ ಸಹಿ ಮಾಡಿದ್ದಾರೆ,

(ಮೋಹನ ಬಾಡಗಂಡಿ)
ಎರಡನೇ ಅಪರ ಜಿಲ್ಲಾ ಮತ್ತು ಸತ್ರ ನ್ಯಾಯಾಲಯ
ಬೆಂಗಳೂರು ಗ್ರಾಮಾಂತರ ಜಿಲ್ಲೆ, ಬೆಂಗಳೂರು